ಎಂದು ಕೂಗಿದಳು.

ಸಾಥಿಯಾ ಅವಸರದಿಂದ ಎದ್ದು ಹೊರಗೆ ಓಡಿದ. ನೆರೆಮನೆಯಿಂದ ಸ್ಟೌ ಪಿನ್ನನ್ನು ತಂದು ನೇರವಾಗಿ ಅಡುಗೆ ಮನೆಯೊಳಗೆ ಹೋಗಿ,

"ವೈನಿ, ನೀವು ಪಕ್ಕಕ್ಕೆ ಸರಿಯಿರಿ. ನಾನು ಸ್ಟೌ ಹೊತ್ತಿಸುತ್ತೇನೆ" ಎಂದ.

ಪಿನ್ ಮಾಡಿ ಸಾಥಿಯಾ ಸ್ಟೌ ಬಲವಾಗಿ ಪಂಪ್ ಮಾಡಿದ. ನೋಡುನೋಡುವುದರಲ್ಲಿ ಸ್ಟೌನಲ್ಲಿ ನೀಲಿಹಸಿರು ಜ್ವಾಲೆಯ ನಾಲಿಗೆಗಳು ಫರ್‌ಫರ್ರೆಂದು ಝುಗಝುಗಿಸತೊಡಗಿದವು.

"ತಗೊಳ್ರಿ ವೈನಿ, ಚಹಾ ಮಾಡ್ರಿನ್ನು" ಇಷ್ಟು ಹೇಳಿ ಸಾಥಿಯಾ ಹೊರಗಿನ ಕೋಣೆಗೆ ಹೋಗುವವನಿದ್ದ. ಅಷ್ಟರಲ್ಲಿ ಸ್ಟೌ ಪಕ್ಕದಲ್ಲಿದ್ದ ಗ್ಯಾಸಿನ ಒಲೆಯತ್ತ ಅವನ ಗಮನ ಹರಿಯಿತು.

"ನಿಮ್ಮಲ್ಲಿ ಗ್ಯಾಸಿನ ಒಲೆಯೂ ಇದೆಯಾ? ಹಾಗಿದ್ದರೆ ನೀವು ಅದರ ಮೇಲೆಯೇ ಚಹಾ ಯಾಕೆ ಮಾಡಬಾರದು?" ಆಶ್ಚರ್ಯಚಕಿತನಾಗಿ ಸಾಥಿಯಾ ಕೇಳಿದ.

"ಸಾಥಿಯಾ ದಾದಾ, ನಾವು ನಿನ್ನೆಯೇ ಕಲ್ಯಾಣದಿಂದ ಇಲ್ಲಿಗೆ ಬಂದಿದ್ದೇವೆ. ಗ್ಯಾಸ್ ಸಿಲಿಂಡರನ್ನು ನಾವು ಅಲ್ಲಿಯೇ ಹಿಂದಿರುಗಿಸಿ ಬಂದಿದ್ದೇವೆ. ಆದರೆ, ಇಲ್ಲಿ ಸಿಲಿಂಡರ್ ಎಲ್ಲಿ ದೊರೆಯುತ್ತದೆಂಬುದು ನಮಗೆ ಗೊತ್ತಿಲ್ಲ" ಎಂದಳು ಸುಷ್ಮಾ.

"ಅರೆರೆ, ಇಷ್ಟೇನಾ? ಅಲ್ಲಿ ಸಿಲಿಂಡರ್ ಹಿಂದಿರುಗಿಸಿದ ರಸೀದಿ, ಡಿಪಾಜಿಟ್ ಮತ್ತು ಸಿಲಿಂಡರಿನ ಹಣ ನನಗೆ ಕೊಟ್ಟರೆ ಈಗಲೇ ಹೋಗಿ ನಾನು ನಿಮ್ಮ ಸಿಲಿಂಡರ್ ತೆಗೆದುಕೊಂಡು ಬರುತ್ತೇನೆ" ಎಂದ ಸಾಥಿಯಾ.

ಸುಷ್ಮಾಳ ಮುಖವು ಕುಬೇರನ ಭಂಡಾರ ದೊರೆತಷ್ಟು ಸಂತೋಷದಿಂದ ಅರಳಿತು. ಆಕೆ ತನ್ನ ಪರ್ಸಿನಿಂದ ರಸೀದಿ ಮತ್ತು ಹಣ ತಂದುಕೊಟ್ಟಳು. ಸಾಥಿಯಾ ಹಣ ತೆಗೆದುಕೊಂಡು ಹೊರಟು ನಿಂತ.

"ಸಾಥಿಯಾ ದಾದಾ, ಚಹಾ ತಯಾರಿದೆ, ಕುಡಿದೇ ಹೋಗು" ಎಂದಳು ಸುಷ್ಮಾ.

"ಬಂದು ಕುಡಿಯುತ್ತೇನೆ" ಎನ್ನುತ್ತ ಆತ ವೇಗವಾಗಿ ಬಾಗಿಲ ಹೊರಗೆ ಹೆಜ್ಜೆಯನ್ನಿಟ್ಟ.

ಸುಷ್ಮಾ, ಉಳ್ಳಾಗಡ್ಡಿ ಹಾಕಿದ ಪೋಹೆ ಮತ್ತು ಚಹಾ ಮಾಡುವುದರೊಳಗೆ ಸಾಥಿಯಾ ಗ್ಯಾಸ್ ಸಿಲಿಂಡರನ್ನು ಹೆಗಲ ಮೇಲಿಟ್ಟುಕೊಂಡು ಬಂದೇ ಬಿಟ್ಟ. ಅವನ ಹಣೆಯ ಮೇಲಿನಿಂದ ಬೆವರಿನ ಹನಿಗಳು ಧಾರೆಗಟ್ಟಿದ್ದವು.

ಅವನು ನೇರವಾಗಿ ಅಡುಗೆಮನೆಗೆ ಹೋದ. ಒಲೆಯ ಪೈಪನ್ನು ಸಿಲಿಂಡರಿಗೆ ಜೋಡಿಸಿದ. ಎರಡೂ ಒಲೆಗಳು ಉರಿಯುತ್ತಿರುವುದನ್ನು ಲೈಟರಿನಿಂದ ಉರಿಸಿ ತೋರಿಸಿದ.

"ವೈನಿಯವರೆ, ಈಗ ಇದರ ಮೇಲೆಯೇ ಅಡಿಗೆ ಮಾಡಿರಿ" ಎಂದ.

ಸಾಥಿಯಾ ಹೊರಗಿನ ಕೋಣೆಗೆ ಬಂದು ಮೊದಲಿನಂತೆ ಫರಸಿಯ ಮೇಲೆ ಕುಳಿತ. ಹೆಗಲ ಮೇಲಿನ ಮಾಸಿದ ವಸ್ತ್ರದಿಂದ ಹಣೆಯ ಮೇಲಿನ ಬೆವರನ್ನು ಒರೆಸಿಕೊಂಡ.

ಸುಷ್ಮಾ ಪೋಹೆಯ ಪ್ಲೇಟ್ ಮತ್ತು ಚಹಾದ ಕಪ್ಪನ್ನು ತಂದು ಅವನ ಮುಂದಿಟ್ಟಳು. ಪೋಹೆಯ ಪ್ಲೇಟನ್ನು ಪಕ್ಕಕ್ಕೆ ಸರಿಸಿ, "ವೈನಿ, ನನಗೆ ತಿಂಡಿ ಬೇಡ. ಚಹಾ ಕೊಡ್ರಿ ಸಾಕು" ಎಂದ.

"ಮತ್ತೆ ಯಾವಾಗಲಾದರೂ ಇದರ ರುಚಿ ನೋಡುತ್ತೇನೆ. ಈಗ ಸ್ಕೂಲ್ ಸಮಯವಾಗಿದೆ. ಮಮತಾಳ ತಮ್ಮ ತಂಗಿಯರನ್ನು ಸ್ಕೂಲಿಗೆ ಕರೆದೊಯ್ಯಬೇಕಾಗಿದೆ" ಎಂದ.

ಆತ ಚಹಾದ ಕಪ್ಪನ್ನೆತ್ತಿ ಬಸಿಯಲ್ಲಿ ಸುರುವಿಕೊಂಡು 'ಉಫ್, ಉಫ್' ಎಂದು ಊದಿ ಒಂದೇ ಸಲಕ್ಕೆ ಎಲ್ಲವನ್ನು ಗುಟುಕರಿಸಿ ಎದ್ದು ಓಡಿದ.